ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

ಪಾಕ್ಷಿಕ

# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ನಾಗ್ಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ವರ್ಷ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿದ್ದ ಕೊಲ್ಲಾಪುರದ ಕನೇರಿಯ ಶೀ ಸಿದ್ಧಗಿರಿ ಸಂಸ್ಥಾನ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಂದ ಶ್ರೀ ಗುರೂಜಿ ಗೋಳ್ವಲ್ಕರ್ ಅವರ ಸಮಾಧಿ 'ಸ್ಮೃತಿ ಚಿಹ್ನ್'ಗೆ ಪುಷ್ಪನಮನ

ಸಂಪುಟ : 45 | ಸಂಚಿಕೆ : 5 | ಜ್ಯೇಷ್ಠ–ಆಷಾಢ | ಕಲಿಯುಗಾಬ್ದ 5125 | 15–06–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಯೋಗ – ಆರೋಗ್ಯಪೂರ್ಣ ಜೀವನಶೈಲಿಗಾಗಿ, ಸ್ವಸ್ಥಸಮಾಜಕ್ಕಾಗಿ

ಭಾರತ ವಿಶ್ವದ ಅತ್ಯಂತ ಪ್ರಾಚೀನ ರಾಷ್ಟ್ರ. ಶತಮಾನಗಳಿಂದ ವಿಶ್ವಕ್ಕೆ ಪೂರಕವಾದ ಕೊಡುಗೆಗಳನ್ನೇ ನೀಡುತ್ತಿರುವ ಸುಸಂಸ್ಕೃತ ರಾಷ್ಟ್ರ. ಪ್ರಸ್ತುತ ಜಗತ್ತು ಆರೋಗ್ಯವನ್ನು ಹಿಡಿತದಲ್ಲಿಟ್ಟುಕೊಳ್ಳಲು, ಸದೃಢ ಆರೋಗ್ಯವನ್ನು ಹೊಂದಲು, ವಿವಿಧ ರಾಸಾಯಿನಿಕಗಳನ್ನು ಬಳಸಿಕೊಂಡು ರಾತ್ರಿ ಹಗಲೆನ್ನದೆ ವಿಜ್ಞಾನದ ಲ್ಯಾಬ್‌ಗಳಲ್ಲಿ ಸಂಶೋಧನೆಯನ್ನು ನಡೆಸುತ್ತಿರುವಾಗ ಭಾರತವು ಇದಕ್ಕೆಲ್ಲ ಕಿರೀಟ ಪ್ರಾಯವಾದ ಆರೋಗ್ಯ 'ಸಾಧನೆ'ಯ ತುತ್ತ ತುದಿಯ ಶಿಖರವನ್ನು ಜಗತ್ತಿಗೆ ನೀಡಿತು. ಅದುವೇ ಯೋಗ. ಯೋಗದಿಂದ ಜ್ಞಾನ ವೃದ್ಧಿಸುತ್ತದೆ, ಅಜ್ಞಾನ ಕಳೆಯುತ್ತದೆ. ಸ್ನೇಹಕ್ಕೆ ಶಕ್ತಿ ತುಂಬಿ ದ್ವೇಷ ಅಶಕ್ತಿಯಿಂದ ತೊಳಲಾಡುತ್ತದೆ. ಮನಸ್ಸು ಸದೃಢವಾಗಿ ಸಮಾಜ ಸುಸ್ಥಿರವಾಗುತ್ತದೆ. ಅನಾರೋಗ್ಯ ಮಾಯವಾಗಿ ಆರೋಗ್ಯದ ವಸಂತ ಕಾಲ ಬರುತ್ತದೆ. ಎಂಬುದನ್ನು ಅರಿತು ಪ್ರತಿವರ್ಷ ಜೂ.21ರಂದು ವಿಶ್ವ ಯೋಗ ದಿನ ಆಚರಿಸಲಾಗುತ್ತಿದೆ.

'ಯಶಸ್ಸು ಮತ್ತು ವೈಫಲ್ಯಗಳನ್ನು ಸಮಾನವಾಗಿ ಸ್ವೀಕರಿಸುವ ಶುದ್ಧ ಮನಸ್ಥಿತಿಯೇ ಯೋಗ' – ಕೇಳಲು ಈ ಮಾತು ಅತ್ಯಂತ ಸರಳವೆನಿಸಿದರೂ ಆಚರಣೆಯಲ್ಲಿ ಇದು ಅತ್ಯಂತ ಕ್ಲಿಷ್ಟಕರ. ಇನ್ನು ಯೋಗ ಸಿದ್ಧಾಂತಕ್ಕೊಂದು ರೂಪವನ್ನು ಕೊಟ್ಟು ಸಾಮಾನ್ಯರನ್ನು ಅಸಾಮಾನ್ಯರನ್ನಾಗಿಸುವ 'ಸಾಧನ' ಮಾರ್ಗವನ್ನು ತನ್ನ ಮೂರುಗ್ರಂಥಗಳ ಮೂಲಕ ನಾಗರಿಕತೆಗಳಿಗೆ ಸಾರಿದ ಯೋಗ ಶಾಸ್ತ್ರದ ಪಿತಾಮಹ 'ಪತಂಜಲಿ'. ಪ್ರಕೃತಿ ಸಹಜವಾದ ಚಿಕಿತ್ಸೆಯೇ ಆರೋಗ್ಯಕ್ಕೆ ಪೂರಕವೆಂಬಂತೆ ಆರೋಗ್ಯ ಹಿತವಾದ ಆಯುರ್ವೇದ ಶಾಸ್ತ್ರವನ್ನು, ಸಮಾಜದ ಒಳಿತಿಗೆ ಹಿತವಾದ ಮಹಾಭಾಷ್ಯವನ್ನು, ದೇಹ ಹಾಗೂ ಮನಸನ್ನು ಹಿಡಿತದಲ್ಲಿಡುವ 'ಯೋಗ ಸೂತ್ರವನ್ನು' ನೀಡಿದ್ದು ನಮ್ಮ ಪತಂಜಲಿ. ಪತಂಜಲಿಯ ಯೋಗ ಸೂತ್ರದಲ್ಲಿರುವ 'ಯೋಗಸ್ಯಚಿತ್ತವೃತ್ತಿ ನಿರೋಧಃ' ಎಂಬ ಒಂದು ಸಾಲು ಸಾಕು ನಮಗೆ ಯೋಗದ ಮಹತ್ವವನ್ನರಿಯಲು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಅಷ್ಟಾಂಗ ಯೋಗದ ಎಂಟು ಮಾರ್ಗಗಳು ಸಾಮಾನ್ಯ ಮನುಷ್ಯನನ್ನು ಅಸಾಮಾನ್ಯನನ್ನಾಗಿ ಮಾಡುತ್ತದೆ. ಪಶು, ಪಶುಪತಿಯಾಗಲು ಅಷ್ಟಾಂಗ ಯೋಗ ಸಹಕಾರಿ.

## ವೈಜ್ಞಾನಿಕ ಅನ್ವೇಷಣೆಗಳನ್ನು ಮೀರಿದ ಆಧ್ಯಾತ್ಮಿಕ ಸಾಧನ ಮಾರ್ಗವೇ ಯೋಗ

ಪ್ರಸ್ತುತ ವಿಜ್ಞಾನದ ಮೇಲೆ ಹಿಡಿತವನ್ನು ಹೊಂದಿರುವ ನಾವು ಯೋಗವಿಜ್ಞಾನದ ಆಂತರ್ಯವನ್ನು ಅರಿಯುವ ಪ್ರಯತ್ನ ಮಾಡಲಿಲ್ಲ. 1961ರಲ್ಲಿ ಫ್ರೆಂಚ್ ಕಾರ್ಡಿಯೊಲಜಿಸ್ಟ್ ಗಳ ಸಂಶೋಧನೆಯ ಪ್ರಕಾರ ಯೋಗ ಸಾಧಕರು ಧ್ಯಾನದ ಉತ್ತುಂಗ ಸ್ಥಿತಿಯನ್ನು ತಲುಪುತ್ತಾ ಅವರ ಹೃದಯ ಬಡಿತವನ್ನು ಹಿಡಿದಿಡುವ ಶಕ್ತಿಯನ್ನು ಹೊಂದಿದ್ದರೆಂಬುದು ಅರಿತಾಗ ಯೋಗವೆಂಬುದು ಸಾಮಾನ್ಯವಲ್ಲ ಎಂದು ಪ್ರತಿಯೊಬ್ಬನಿಗೂ ಅರಿಯುವ ಸತ್ಯ. ಅಮೆರಿಕದ ಸಂಸ್ಥೆಗಳ ಸಂಶೋಧನೆಯ ಪ್ರಕಾರ ಯೋಗಕ್ಕೆ ನಮ್ಮ ಬುದ್ಧಿ ಹಾಗೂ ಜೆನೆಟಿಕ್ ಕಾರ್ಯಗಳನ್ನು ನಿಯಂತ್ರಿಸಿ ಬೇಕಾದ ರೀತಿಯಲ್ಲಿ ಮಾರ್ಪಡಿಸಬಹುದೆಂಬ ಸತ್ಯ ಸಾಬೀತಾಗಿದೆ.

## ಯೋಗ ನಮ್ಮ ಹೆಮ್ಮೆ, ಬೇಡ ಕಡೆಗಣನೆ

ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿರುವ ಇಂದಿನ ಭಾರತದ ಯುವಜನತೆ ಇಲ್ಲಿನ ಮಣ್ಣಿನ ಅಂತಃಸತ್ವವನ್ನು ಮರೆತದ್ದಕ್ಕಿಂತ ಹೆಚ್ಚಾಗಿ ಕಡೆಗಣಿಸಿ ಬಿಟ್ಟಿದ್ದಾರೆ. ಅಸ್ತಮಾದಂತಹ ಉಸಿರಾಟ ತೊಂದರೆಗಳಿಗೊಳಗಾದ ವ್ಯಕ್ತಿಗೆ ಪಾಶ್ಚಾತ್ಯ ಮದ್ದು ಲಕ್ಷ ಕೊಟ್ಟರೂ ಒಳಿತೇ ಎನಿಸುತ್ತದೆ. ಆದರೆ ಯೋಗವೆಂಬುದು ಸಮಯ ವ್ಯರ್ಥ ಕಾರ್ಯ ಎಂದು ಅನಿಸುತ್ತದೆ. ಮಾನಸಿಕ ಖಿನ್ನತೆಗೊಳಗಾದವನು ಮದ್ದಿಗೆ ಶರಣಾಗುತ್ತಾನೆ ಹೊರತು ಯೋಗಕ್ಕಲ್ಲ!

## ಯೋಗಕ್ಕೆ ಕೊಡಿ 'ಟೈಮ್', ಹೆಚ್ಚಿಸಿ 'ಲೈಫ್ ಟೈಮ್'

ಪ್ರಸ್ತುತ ಸಮಾಜವನ್ನು ಒಮ್ಮೆ ಅವಲೋಕಿಸಿ ನೋಡಿದಾಗಲೂ ಇಂದಿಗೂ ಸಹ ತನ್ನ ಜೀವನದುದ್ದಕ್ಕೂ ಯೋಗ ಮಾರ್ಗವನ್ನ ಅಳವಡಿಸಿದವರು ಆರೋಗ್ಯವಾಗಿ ಬದುಕುತ್ತಿದ್ದಾರೆ. ಮನೆಯ ಡಬ್ಬಿಗಳು ಮಾತ್ರೆಗಳಿಂದ ಕೂಡಿಲ್ಲ. ಜೂನ್ 21ನೇ ತಾರೀಖನ್ನು 'ವಿಶ್ವ ಯೋಗ ದಿನ' ಎಂದು ಇಡೀ ಪ್ರಪಂಚವೇ ಆಚರಿಸುತ್ತಿದೆ. ಆದರೆ ವಿಪರ್ಯಾಸದ ಸಂಗತಿಯೆಂದರೆ ವಿಶ್ವಕ್ಕೆ ಯೋಗವನ್ನು ಕೊಟ್ಟವರು ನಾವು ಎಂಬ ಹೆಗ್ಗಳಿಕೆ ಪಡೆಯುವ ಮಂದಿ ಅದೇ ಯೋಗದ ಅಭ್ಯಾಸಕ್ಕೆ ಕೊಡಲು ಸಮಯವಿಲ್ಲ ಎಂದು ನೆಪ ಹೇಳುತ್ತೇವೆ. ಯೋಗದ ಅಭ್ಯಾಸ ಅಥವಾ ಆರೋಗ್ಯಕರ ಜೀವನಶೈಲಿಯ ನಿರಂತರ ಪರಿಪಾಲನೆ ನಮ್ಮ ಬದುಕಿನ ಭಾಗವೇ ಆಗಬೇಕು. ಅನ್ಯ ನಿರುಪಯುಕ್ತ ಕೆಲಸಗಳಲ್ಲಿ ದಿನದ ಕೆಲವು ಗಂಟೆಗಳನ್ನು ಕಳೆಯುವ ನಾವು, ಅದನ್ನು ಕಡಿಮೆಗೊಳಿಸಿ ಆ ಸಮಯವನ್ನು ಆರೋಗ್ಯಕರ ಜೀವನಶೈಲಿಗಾಗಿ ಬಳಸಿಕೊಳ್ಳಬಹುದು.

# ಭಾರತ ಜಾಗತಿಕ ನಾಯಕನಾಗಿ ರೂಪುಗೊಳ್ಳುತ್ತಿರುವುದರ ಸಂಕೇತ ಜಿ–20 ನಾಯಕತ್ವ

21ನೇ ಶತಮಾನವನ್ನು ನಿಶ್ಚಯವಾಗಿ ಭಾರತ ಆಳುತ್ತದೆ ಎಂಬ ಸಿಡಿಲಸಂತ ಸ್ವಾಮಿ ವಿವೇಕಾನಂದರ ಮಾತಿನಂತೆ ಭಾರತ ಈ ಶತಮಾನದಲ್ಲಿ ಜಾಗತಿಕ ಮನ್ನಣೆಯನ್ನು ಪಡೆದುಕೊಳ್ಳುತ್ತಿದೆ. ಇದೇ ಸಾಲಿಗೆ ಜಿ –20 (Global – 20) ನಾಯಕತ್ವ ಭಾರತಕ್ಕೆ ಅರ್ಹವಾಗಿಯೇ ಒಲಿದಿರುವುದೂ ಸೇರುತ್ತದೆ.

## ಏನಿದು ಜಿ– 20?

ಜಿ20 19 ರಾಷ್ಟ್ರಗಳು ಮತ್ತು ಯೂರೋಪಿಯನ್ ಒಕ್ಕೂಟವನ್ನು ಒಳಗೊಂಡ ಜಗತ್ತಿನ ಅತ್ಯಂತ ಬಲಿಷ್ಠ ಆರ್ಥಿಕ ಒಕ್ಕೂಟ. ಜಾಗತಿಕ ಆರ್ಥಿಕತೆಯ ಸದೃಢತೆ, ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ ಮತ್ತು ನಿರ್ಧಾರ ಕೈಗೊಳ್ಳುವಿಕೆ ಇದರ ಪ್ರಮುಖ ಉದ್ದೇಶ. ವಿಶ್ವದ ಅತ್ಯಂತ ಹೆಚ್ಚು ಪ್ರಭಾವಿಶಾಲಿ ಜಿ20, ಜಗತ್ತಿನ ಶೇ.85ರಷ್ಟು ಒಟ್ಟು ದೇಶೀಯ ಉತ್ಪನ್ನವನ್ನು(ಜಿಡಿಪಿ), ಶೇ.75ರಷ್ಟು ಜಾಗತಿಕ ವ್ಯಾಪಾರವನ್ನು ಮತ್ತು ಜಗತ್ತಿನ 2/3 ಜನಸಂಖ್ಯೆಯನ್ನು ಹೊಂದಿದೆ.

## ಯಾವಾಗ ಪ್ರಾರಂಭ?

ಜೂನ್ 1999 ಜರ್ಮನಿಯ ಕಲೋನ್‌ನಲ್ಲಿ ನಡೆದ ವಿಶ್ವದ ಬಲಿಷ್ಠ ಆರ್ಥಿಕತೆಯುಳ್ಳ ರಾಷ್ಟ್ರಗಳನ್ನೊಳಗೊಂಡ ಜಿ7 ಶೃಂಗಸಭೆಯಲ್ಲಿ ಜಿ20 ಕುರಿತು ಪ್ರಸ್ತಾಪವಾಯಿತು. ಅದು ಸೆಪ್ಟೆಂಬರ್ 26, 1999ರಲ್ಲಿ ನಡೆದ ಜಿ7 ರಾಷ್ಟ್ರಗಳ ವಿತ್ತಾ ಸಚಿವರ ಸಭೆಯಲ್ಲಿ ಅಧಿಕೃತಗೊಂಡು ಅದೇ ವರ್ಷ ಬರ್ಲಿನ್‌ನಲ್ಲಿ ಡಿಸೆಂಬರ್ 15–16ರಂದು ಪ್ರಥಮ ಜಿ20 ಸಭೆ ನಡೆಯಿತು.

## ಜಿ–20 ನಾಯಕತ್ವ ಭಾರತಕ್ಕೆ ಹೇಗೆ ಫಲಕಾರಿ?

- ಭಾರತ ಜಿ–20ಯ ಅಧ್ಯಕ್ಷ ವರ್ಷದಲ್ಲಿ ತನ್ನ ನಾಯಕತ್ವದ ಛಾಯೆಯನ್ನು ವಿಶ್ವದಲ್ಲಿ ಪರಿಣಾಮಕಾರಿಯಾಗಿ ಹೆಚ್ಚಿಸಿಕೊಳ್ಳಲು, ನೂತನ ವ್ಯಾವಹಾರಿಕ ಸಂಬಂಧಗಳನ್ನು ಉಳಿದ ರಾಷ್ಟ್ರಗಳೊಂದಿಗೆ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ.
- ಈ ಬಾರಿಯ ಜಿ–20ಥೀಮ್ "ವಸುಧೈವ ಕುಟುಂಬಕಮ್ – ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ". ಜಗತ್ತನ್ನು ಒಂದು ಕುಟುಂಬವಾಗಿ ಕಂಡ ಭಾರತಕ್ಕೆ ಅಸ್ಮಿತೆಯ ಆಧಾರಿತವಾಗಿ ನಾಯಕತ್ವವನ್ನು ಮುನ್ನಡೆಸಬಹುದು.
- ಭಾರತದ ಜಾಗತಿಕ ಅಸ್ತಿತ್ವಕ್ಕೆ ಬಹುದೊಡ್ಡ ಅಡ್ಡಪರಿಣಾಮವನ್ನು ಬೀರುತ್ತಿರುವ ಭಯೋತ್ಪಾದನೆ ಮತ್ತು ಯುದ್ಧಗಳಂತಹ ಚಟುವಟಿಕೆಗಳ ವಿರುದ್ಧ ಜಿ20 ಸೆಟೆದುನಿಂತಿರುವುದು ಸಹಾಯವಾಗಲಿದೆ. ಈ ಬಾರಿಯ ನಾಯಕತ್ವ ಭಾರತಕ್ಕೆ ದೊರೆತಿರುವುದರಿಂದ ಭಯೋತ್ಪಾದನೆಯ ವಿರುದ್ಧ 'ನೋ ಕಾಂಪ್ರೊಮೈಸ್' ನೀತಿಯನ್ನು ವಿಶ್ವದ ಬಲಿಷ್ಠ ರಾಷ್ಟ್ರಗಳ ಮುಂದೆ ಸಮರ್ಥವಾಗಿ ಪ್ರತಿಷ್ಠಾಪಿಸಲಿದೆ.
- ಭಾರತದ ಗುಣಧರ್ಮವೇ ಆಗಿರುವ 'ಆನೋ ಭದ್ರಾ ಕೃತವೋ ಯಂತು ವಿಶ್ವತಃ' ಎಂಬ ಆಚರಣೆಯ ವೈಶ್ವಿಕ ರೂಪದ ಪ್ರತೀಕ ಜಿ20. ವಿಶ್ವದ ವಿವಿಧ ರಾಷ್ಟ್ರಗಳಲ್ಲಿರುವ ಉತ್ತಮ ಆಲೋಚನೆಗಳ ಸಮಾಗಮ ಜಿ–20ಯಲ್ಲಿ ಆಗುವುದರಿಂದ ಭಾರತ ತನ್ನ ಚಿಂತನೆಗಳನ್ನೂ ಮುಂದಿಡಲು ಅನುಕೂಲವಾಗುತ್ತದೆ. ಏಕೆಂದರೆ ಜಿ20ಯ Development Working Group (DWG) ಸಭೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ, ಅಭಿವೃದ್ಧಿ ಹೊಂದದ ಮತ್ತು ದ್ವೀಪ ರಾಷ್ಟ್ರಗಳ ಅಭಿವೃದ್ಧಿಯ ಕುರಿತಾದ ಸಮಸ್ಯೆಗಳನ್ನು ಚರ್ಚಿಸುತ್ತದೆ. ಅಷ್ಟೇಯಲ್ಲದೇ DWG ಜಿ–20 ಸದಸ್ಯ ರಾಷ್ಟ್ರಗಳಿಗೆ ಒಗ್ಗೂಡಲು ಮತ್ತು ಬಹುಪಕ್ಷೀಯತೆಗೆ ಆದ್ಯತೆ ನೀಡಲು, ಬೆಳವಣಿಗೆಯನ್ನು ಉತ್ತೇಜಿಸುವ ಪರಿಹಾರಗಳನ್ನು ಹಂಚಿಕೊಳ್ಳಲು, ಅಭಿವೃದ್ಧಿ ಯೋಜನೆಗಳನ್ನು ಮರುರೂಪಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (SDG) ಸಾಧಿಸಲು ಒಂದು ವೇದಿಕೆಯಾಗಿದೆ. ಜಿ–20 ಜ್ಞಾನ, ಪರಿಣತಿ, ಆರ್ಥಿಕ ವಿಕಾಸಕ್ಕೆ ಹಣಕಾಸಿನ ಸಂಪನ್ಮೂಲಗಳನ್ನು ಹೊಂದಿದೆ.
- ಆರ್ಥಿಕ ಬೆಳವಣಿಗೆಯಲ್ಲಿ ಜಗತ್ತಿನ ಅಚ್ಚರಿಗೆ ಕಾರಣವಾಗುವಂತೆ ಬೆಳೆಯುತ್ತಿರುವ ಹಾಗೂ ಬ್ರಿಟನ್‌ಅನ್ನು ಹಿಂದಿಕ್ಕಿ ವಿಶ್ವದ ಐದನೇ ಬೃಹತ್ ಆರ್ಥಿಕತೆಯ ರಾಷ್ಟ್ರವಾಗಿ ಮುಂದಡಿಯಿಟ್ಟ ಭಾರತಕ್ಕೆ ಈ ಸಂದರ್ಭದಲ್ಲಿ ಜಿ20 ಅಧ್ಯಕ್ಷ ಸ್ಥಾನ ಸಿಕ್ಕಿದ್ದು ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ತನ್ನ ಪ್ರಭಾವವನ್ನು ಬೀರುವುದಕ್ಕೆ ಸಾಧ್ಯವಾಗುತ್ತದೆ. ಅದರ ಮೂಲಕ ವಿಶ್ವದ ಸವಾಲುಗಳನ್ನು ಎದುರಿಸುವ ಸಲುವಾಗಿ ಮತ್ತು ಸುಸ್ಥಿರ ಆರ್ಥಿಕ ಅಭಿವೃದ್ಧಿಗಾಗಿ ಜನರ ಕೇಂದ್ರಿತ ಯೋಜನೆಗಳನ್ನು ತರಲು ಕಾರ್ಯನಿರ್ವಹಿಸುವ ಅವಕಾಶ ದೊರೆತಿದೆ.
- ಭಾರತದ 60 ನಗರಗಳಲ್ಲಿ 200 ಜಿ–20 ಸಂಬಂಧಿತ ಸಭೆಗಳು ನಡೆಯಲಿವೆ. ಭಾರತದ ತನ್ನ ಸಾಂಸ್ಕೃತಿಕ ಸಿರಿವಂತಿಕೆಯ ಪರಿಚಯ ಮಾಡಿಕೊಡುವುದರ ಜೊತೆಗೆ ಉಳಿದ ರಾಷ್ಟ್ರಗಳಿಗೆ ಹೂಡಿಕೆಗೆ ಭಾರತದಲ್ಲಿರುವ ಅವಕಾಶಗಳನ್ನೂ ತಿಳಿಸುವ ವೇದಿಕೆ ಇದಾಗಿದೆ.
- ಭಾರತ ಜಾಗತಿಕ ದಕ್ಷಿಣದ (ಸಮಭಾಜಕದ ದಕ್ಷಿಣದ ರಾಷ್ಟ್ರಗಳು) ನಾಯಕನಾಗಬೇಕು ಎಂಬುದನ್ನು ಹಲವು ರಾಷ್ಟ್ರಗಳು ಮನವಿ ಮಾಡಿಕೊಂಡಿರುವುದು ತಿಳಿದಿದೆ. ವಿಶ್ವ ಈ ದಶಕದಲ್ಲಿ ಎದುರಿಸಿದ ಅತ್ಯಂತ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಜಾಗತಿಕ ದಕ್ಷಿಣ ರಾಷ್ಟ್ರಗಳಿಗೆ ಭಾರತ ಆಪತ್ಬಾಂಧವನಂತೆ ಸಹಾಯ ಮಾಡಿದೆ. ಹಾಗೂ ಜಾಗತಿಕ ವೇದಿಕೆಗಳಲ್ಲೂ ಈ ರಾಷ್ಟ್ರಗಳಲ್ಲಾಗಬೇಕಾದ ಅಭಿವೃದ್ಧಿ ಕಾರ್ಯಗಳ ಪರವಾಗಿ ಭಾರತ ತನ್ನ ಧ್ವನಿಯನ್ನು ಎತ್ತಿದೆ.


# ಸಂಸ್ಮರಣೆ ಬಾಳಾಸಾಹೇಬ್ ದೇವರಸ್ (11ನೇ ಡಿಸೆಂಬರ್, 1915 – 17ನೇ ಜೂನ್, 1996)

ಬಾಳಾಸಾಹೇಬ್ ದೇವರಸ್ ಎಂದೇ ಜನಪ್ರಿಯರಾಗಿದ್ದ ಮಧುಕರ ದತ್ತಾತ್ರೇಯ ದೇವರಸ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೆಯ ಸರಸಂಘಚಾಲಕರು.

ಬಾಳಾಸಾಹೇಬರು ಡಿಸೆಂಬರ್ 15, 1915 ರಂದು ನಾಗ್ಪುರದಲ್ಲಿ ಜನಿಸಿದರು. ಅವರು ದತ್ತಾತ್ರೇಯ ಕೃಷ್ಣರಾವ್ ದೇವರಸ್ ಮತ್ತು ಪಾರ್ವತಿಬಾಯಿ ಅವರ ಎಂಟನೇ ಮಗು. ಇವರ ಕಿರಿಯ ಸಹೋದರ ಭಾವೂರಾವ್ ದೇವರಸ್(ಮುರುಳೀಧರ) ಕೂಡ ಆರ್.ಎಸ್.ಎಸ್. ಪ್ರಚಾರಕರಾಗಿದ್ದರು. 1925 ರಲ್ಲಿ ಸಂಘದ ಸ್ಥಾಪನೆಯಾಗುವ ವೇಳೆಗೆ, ದೇವರಸ್ ಕುಟುಂಬವು ನಾಗ್ಪುರದ ಇಟ್ವಾರಿ ಮೊಹಲ್ಲಾಕ್ಕೆ ಸ್ಥಳಾಂತರಗೊಂಡಿತು. ಮೊದಲ ಶಾಖೆಗೆ ಸೇರಿದಾಗ ಬಾಳಾಸಾಹೇಬರು ಆರನೇ ತರಗತಿಯಲ್ಲಿ ಓದುತ್ತಿದ್ದರು . ಬಾಳಾಸಾಹೇಬರು 1938 ರಲ್ಲಿ ನಾಗ್ಪುರದ ಮೋರಿಸ್ ಕಾಲೇಜಿನಿಂದ ಪದವಿ ಪಡೆದರು ಮತ್ತು ನಾಗ್ಪುರ ವಿಶ್ವವಿದ್ಯಾಲಯದ ಕಾಲೇಜ್ ಆಫ್ ಲಾ ದಲ್ಲಿ ತಮ್ಮ ಎಲ್ ಎಲ್ ಬಿ ಪದವಿ ಪಡೆದರು. ಸಂಘಸ್ಥಾಪಕ ಡಾ. ಕೇಶವರಾವ್ ಬಲಿರಾಂ ಹೆಡ್ಗೇವಾರ್ ಅವರ ನೇರ ಸಂಪರ್ಕದಿಂದ ಸ್ಫೂರ್ತಿ ಪಡೆದ ಅವರು, ತಮ್ಮ ಜೀವನವನ್ನು ಸಂಘಟನೆಗಾಗಿ ಅರ್ಪಿಸಲು ನಿರ್ಧರಿಸಿದರು.

ಬಾಲ್ಯದಿಂದಲೇ ಸಂಘದ ಸ್ವಯಂಸೇವಕರಾಗಿದ್ದ ಬಾಳಾಸಾಹೇಬ್, ಕುಶ ಪಥಕ – ಬಾಲಕರ ಗುಂಪಿನ ಸದಸ್ಯರಾಗಿದ್ದರು. ತನ್ನ ಓರಗೆಯ ಹಲವು ಬಾಲಕರನ್ನು ಸಂಘದ ಶಾಖೆಗೆ ಕರೆತಂದರು. ಡಾ. ಹೆಡ್ಗೇವಾರ್ ಅವರ ಮಾರ್ಗದರ್ಶನದಿಂದ ಕುಶ ಪಥಕದ ಎಲ್ಲಾ ಬಾಲಕರು ಮುಂದೆ ಸಂಘದ ಪ್ರಚಾರಕರಾಗಿ ತಮ್ಮ ಜೀವನವನ್ನೇ ಸಂಘ ಕಾರ್ಯಕ್ಕೆ ಮುಡಿಪಾಗಿಟ್ಟರು. ಬಾಳಾಸಾಹೇಬರು ಬಂಗಾಲ ಪ್ರಾಂತದ ಮೊದಲ ಸಂಘ ಪ್ರಚಾರಕರಾಗಿದ್ದರು. ನಂತರ ನಾಗಪುರದಲ್ಲಿನ ಮರಾಠಿ ಪತ್ರಿಕೆ ತರುಣ್ ಭಾರತ್ ಮತ್ತು ಹಿಂದಿ ದಿನಪತ್ರಿಕೆಯಾದ ಯುಗಧರ್ಮದ ಪ್ರಕಟಣೆಯ ಜವಾಬ್ದಾರಿ ವಹಿಸಿಕೊಂಡರು. 1965ರಲ್ಲಿ ಆರ್‌ಎಸ್‌ಎಸ್‌ನ ಪ್ರಧಾನ ಸರಕಾರ್ಯವಾಹರಾದರು. ಆರ್‌ಎಸ್‌ಎಸ್‌ನ ಎರಡನೆಯ ಮುಖ್ಯಸ್ಥರಾಗಿದ್ದ ಎಂ.ಎಸ್. ಗೋಳ್ವಾಲ್ಕರ್ ಅವರ ನಿಧನದ ನಂತರ, ಬಾಳಾಸಾಹೇಬ್ ದೇವರಸ್ 1973 ರಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕರಾದರು. ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ಸ್ವಯಂಸೇವಕರು ಕಾರ್ಯನಿರ್ವಹಿಸುವ ದಿಕ್ಕಿನಲ್ಲಿ ಬಾಳಾಸಾಹೇಬರು ಹೆಚ್ಚಿನ ಆಸಕ್ತಿ ಹೊಂದಿದ್ದರು. ಸೇವಾ ಚಟುವಟಿಕೆ, ಅಸ್ಪೃಶ್ಯತೆ ನಿವಾರಣೆಯಂಥ ಕಾರ್ಯಗಳಲ್ಲಿ ಸ್ವಯಂಸೇವಕರು ಹೆಚ್ಚಾಗಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡುತ್ತಿದ್ದರು.

1975 ರಲ್ಲಿ ಅಂದಿನ ಭಾರತದ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಘೋಷಿಸಿ ಸಂಘಕ್ಕೆ ನಿಷೇಧ ಹೇರಿದರು. MISA ನಂತಹ ಕರಾಳ ಕಾನೂನುಗಳ ಅಡಿಯಲ್ಲಿ ಸಾವಿರಾರು ಆರ್‌ಎಸ್‌ಎಸ್ ಸ್ವಯಂಸೇವಕರನ್ನು ಜೈಲಿನಲ್ಲಿರಿಸಲಾಯಿತು ಮತ್ತು ಹಿಂಸಿಸಲಾಯಿತು. ಬಾಳಾಸಾಹೇಬರ ಪ್ರೇರಣೆ ಮತ್ತು ಯಶಸ್ವಿ ಮಾರ್ಗದರ್ಶನದಲ್ಲಿ ಬೃಹತ್ ಸತ್ಯಾಗ್ರಹ ನಡೆಯಿತು. ಇದೇ ಸಂದರ್ಭದಲ್ಲಿ ಜಯಪ್ರಕಾಶ ನಾರಾಯಣರ ನೇತೃತ್ವದ ತುರ್ತು



ಪರಿಸ್ಥಿತಿ ವಿರೋಧಿ ಚಳುವಳಿಯಾದ "ಜೆಪಿ ಚಳವಳಿ" ಗೆ ಆರ್‌ಎಸ್‌ಎಸ್‌ನ ಬೆಂಬಲ ಘೋಷಿಸಿದರು. 1977 ರಲ್ಲಿ ತುರ್ತು ಪರಿಸ್ಥಿತಿಯನ್ನು ತೆಗೆದುಹಾಕಲಾಯಿತು ಮತ್ತು ಸಂಘದ ಮೇಲಿನ ನಿಷೇಧವನ್ನು ತೆಗೆದುಹಾಕಲಾಯಿತು. ತುರ್ತುಪರಿಸ್ಥಿತಿಯ ನಂತರ ಬಾಳಾಸಾಹೇಬರು ಜೈಲಿನಿಂದ ಹೊರಬಂದ ತಕ್ಷಣ, ಅವರ ಸಂದೇಶವು ಸ್ಪಷ್ಟವಾಗಿತ್ತು – "ಸೇಡಿನ ಮನೋಭಾವ ಇರಬಾರದು. ಗೆಲುವಿನ ಶ್ರೇಯವನ್ನು ಆರ್‌ಎಸ್‌ಎಸ್‌ಗೆ ನೀಡಲಾಗಿದೆ. ನಾವು ದೊಡ್ಡ ಹೃದಯವಂತರಾಗುವ ಸಮಯ ಬಂದಿದೆ. ನಮ್ಮನ್ನು ಚೆನ್ನಾಗಿ ನಡೆಸಿಕೊಳ್ಳದವರ ಹೃದಯದಲ್ಲಿ ನಾವು ಬದಲಾವಣೆಯನ್ನು ತರಬೇಕಾಗಿದೆ" ಎಂದು ಅವರು ಮಾರ್ಚ್ 1977 ರಲ್ಲಿ ನಾಗ್ಪುರದಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಹೇಳಿದರು.

ಬಾಳಾಸಾಹೇಬ್ ದೇವರಸರು, ಸಾವರ್ಕರ್ ನೀಡಿದ ಹಿಂದುತ್ವದ ವ್ಯಾಖ್ಯೆ "ನಾವು ಒಂದು ಸಂಸ್ಕೃತಿ ಮತ್ತು ಒಂದು ರಾಷ್ಟ್ರ ಹಿಂದೂ ರಾಷ್ಟ್ರವನ್ನು ನಂಬುತ್ತೇವೆ. ಆದರೆ ಹಿಂದೂಗಳ ನಮ್ಮ ವ್ಯಾಖ್ಯಾನವು ಯಾವುದೇ ನಿರ್ದಿಷ್ಟ ರೀತಿಯ ನಂಬಿಕೆಗೆ ಸೀಮಿತವಾಗಿಲ್ಲ. ಹಿಂದೂಗಳ ನಮ್ಮ ವ್ಯಾಖ್ಯಾನವು ಒಂದು ಸಂಸ್ಕೃತಿಯಲ್ಲಿ ನಂಬಿಕೆ ಇಡುವವರನ್ನು ಒಳಗೊಂಡಿದೆ ಮತ್ತು ಎಲ್ಲರೂ ಹಿಂದೂ-ರಾಷ್ಟ್ರದ ಭಾಗವಾಗಬಹುದು. ನಾವು ಹಿಂದೂ ಪದವನ್ನು ವಿಶಾಲ ಅರ್ಥದಲ್ಲಿ ಬಳಸುತ್ತೇವೆ." ಎನ್ನುವುದನ್ನು ಬೆಂಬಲಿಸಿದ್ದರು.

1974 ರ ಮೇ ತಿಂಗಳಲ್ಲಿ ಪುಣೆಯಲ್ಲಿ ಏರ್ಪಡಿಸಿದ್ದ ವಸಂತ ವ್ಯಾಖ್ಯಾನ ಮಾಲಾ ಎಂಬ ಉಪನ್ಯಾಸ ಮಾಲೆಯ ವೇದಿಕೆಯಿಂದ ನೀಡಿದ ಒಂದು ಪ್ರಮುಖ ಭಾಷಣದಲ್ಲಿ, ದೇವರಸ್‌ರು ಅಸ್ಪೃಶ್ಯತೆಯ ಆಚರಣೆಯನ್ನು ಖಂಡಿಸಿದರು ಮತ್ತು ಆರ್‌ಎಸ್‌ಎಸ್ ಸ್ವಯಂಸೇವಕರಿಗೆ ಅಸ್ಪೃಶ್ಯತೆಯ ಪಿಡುಗನ್ನು ತೆಗೆದುಹಾಕುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಮನವಿ ಮಾಡಿದರು. ಇದೇ ಭಾಷಣದಲ್ಲಿ ಬಾಳಾಸಾಹೇಬರು "ಅಸ್ಪೃಶ್ಯತೆ ಪಾಪವಲ್ಲವಾದರೆ ಜಗತ್ತಿನಲ್ಲಿ ಯಾವುದೂ ಪಾಪವಲ್ಲ" ಎಂದು ಉದ್ಘರಿಸಿದ್ದರು. ಸರಸಂಘಚಾಲಕರ ಈ ಕರೆಯಿಂದ ಸ್ಫೂರ್ತಿಗೊಂಡ ಸಂಘದ ಸ್ವಯಂಸೇವಕರು ಹೊಸ ಹುರುಪಿನೊಂದಿಗೆ ಜಾತಿ ಆಧಾರಿತ ತಾರತಮ್ಯದ ಭೂತದ ವಿರುದ್ಧ ಹೋರಾಡಲು ಕಾರಣವಾಯಿತು. ಸರಸಂಘಚಾಲಕರಾಗಿ 21 ವರ್ಷಗಳ ಕಾಲ ಜವಾಬ್ದಾರಿ ನಿರ್ವಹಿಸಿದ ಬಾಳಾಸಾಹೇಬರು ಜಾತಿ ಆಧಾರಿತ ತಾರತಮ್ಯ ಮತ್ತು ಅಸ್ಪೃಶ್ಯತೆ ವಿರುದ್ಧ ಪಟ್ಟುಬಿಡದೆ ಪ್ರಚಾರ ಮಾಡಿದರು. 1991 ರಲ್ಲಿ ಸ್ಥಾಪನೆಯಾದ ಸ್ವದೇಶಿ ಜಾಗರಣ ಮಂಚ್ ಬಾಳಾಸಾಹೇಬರ ಮೆದುಳಿನ ಕೂಸು. ಇದು ಸ್ವದೇಶಿಯತೆಯನ್ನು ರಕ್ಷಿಸುವಲ್ಲಿ ಮತ್ತು ಸ್ವದೇಶಿ ಜಾಗೃತಿಯನ್ನು ಮೂಡಿಸುವ ಕಾರ್ಯನಿರ್ವಹಿಸುತ್ತಿದೆ.




ಒರಿಸ್ಸಾದ ಬಾಲಸೋರ್ ನಲ್ಲಿ ಸಂಭವಿಸಿದ ಭೀಕರ ರೈಲು ದುರಂತದ ನಂತರ ಸೇವಾ ಕಾರ್ಯದಲ್ಲಿ ನಿರತರಾದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು.

## ಎಲ್ಲೋ ಕೇಳಿದ ಕಥೆ

## ಆರ್ಥಿಕ ಶುದ್ಧತೆಯ ಮಹತ್ವ

1971ರ ಮಾರ್ಚ್ ತಿಂಗಳಲ್ಲಿ ನಡೆದ ಬೈಠಕ್‌ನಲ್ಲಿ ಆಸೀನರಾದ ಒಡನೆಯೇ ಶ್ರೀ ಗುರೂಜಿಯವರು ಸೂರೂ ಅವರನ್ನು ಕರೆದು ಅವರ ಕೈಗೆ ಅದೇನನ್ನೋ ನೀಡಿದರು. ಸೂರುಜೀ ಸದ್ದಿಲ್ಲದೇ ಜೇಬಿಗಿಳಿಸಿದರು. ಬೈಠಕ್‌ನಲ್ಲಿದ್ದವರಿಗೆಲ್ಲಾ ಕುತೂಹಲ ಮೂಡಿದರೂ ಮಾತಾಡುವಂತಿಲ್ಲ. ಅವಧಿ ಮುಗಿದೊಡನೆ ಎಲ್ಲರೂ ಸೂರುಜೀ ಅವರನ್ನು ಮುತ್ತಿಕೊಂಡರು. ಸೂರುಜೀ ಜೇಬಿಗೆ ಕೈಇಳಿಸಿ ಆ ವಸ್ತುವನ್ನು ತೆಗೆದು ತೋರಿಸಿದರು. ಎಲ್ಲರೂ ಗಹಗಹಿಸಿ ನಕ್ಕರು.


ನಡೆದದ್ದು ಇಷ್ಟು. 1970ರ ಅಖಿಲ ಭಾರತ ಪ್ರತಿನಿಧಿ ಸಭಾ ಬೈಠಕ್‌ಗಾಗಿ ಬೆಂಗಳೂರಿಗೆ ಬಂದಿದ್ದ ಪ್ರಚಾರಕರೆಲ್ಲ 'ಹೇಗೂ ದಕ್ಷಿಣಕ್ಕೆ ಬಂದಿದ್ದೇವೆ. ಇತ್ತೀಚೆಗಷ್ಟೇ ಲೋಕಾರ್ಪಣೆಗೊಂಡಿರುವ ವಿವೇಕಾನಂದ ಶಿಲಾ ಸ್ಮಾರಕವನ್ನು ನೋಡಬೇಕು' ಎಂಬ ಬಯಕೆ ವ್ಯಕ್ತಪಡಿಸಿದ್ದರು. ಏಕನಾಥ ರಾನಡೆಯವರ ವಿಶಿಷ್ಟ ಕರ್ತೃತ್ವಶಕ್ತಿಯು ಶಿಲಾ ಸ್ಮಾರಕವನ್ನು ಇಡೀ ರಾಷ್ಟ್ರವನ್ನೇ ಭಾವನಾತ್ಮಕವಾಗಿ ಬೆಸೆಯುವ ಸಾಧನವನ್ನಾಗಿ ಪರಿವರ್ತಿಸಿತ್ತು. ದೇಶ ವಾಸಿಗಳಿಗೆಲ್ಲಾ ದೇಣಿಗೆ ನೀಡುವ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದರು. ಅದಕ್ಕಾಗಿ ದೇಶದೆಲ್ಲೆಡೆ ಸಂಘದ ಕಾರ್ಯಕರ್ತರು ದುಡಿದಿದ್ದರಿಂದ ಈ ಬಯಕೆ ಮೂಡುವುದು ಸಹಜ. ಇದಕ್ಕೆ ಗುರೂಜಿಯವರ ಅನುಮತಿಯೂ ಸಿಕ್ಕಿತ್ತು.

ಆದರೆ ಆಗ ತಾನೇ ರೂಪುಗೊಳ್ಳುತ್ತಿದ್ದ ವಿವೇಕಾನಂದ ಕೇಂದ್ರಕ್ಕೆ ಅಷ್ಟೊಂದು ಮಂದಿಗೆ ಊಟ, ಉಪಚಾರ, ವಸತಿ ಮೊದಲಾದ ವ್ಯವಸ್ಥೆ ಮಾಡುವ ಆರ್ಥಿಕ ಶಕ್ತಿ ಇರಲಿಲ್ಲ. ಗುರೂಜಿಯವರು ಸೂರು ಅವರನ್ನು ಕರೆದು "ನೋಡಿ, ವಿವೇಕಾನಂದ ಕೇಂದ್ರ ಈಗ ತಾನೇ ವಿಕಾಸಗೊಳ್ಳುತ್ತಿದೆ. ಅದರ ಮೇಲೆ ಆರ್ಥಿಕ ಹೊರೆ ಹಾಕಬಾರದು. ತಮಿಳುನಾಡಿನ ಸಂಘದ ವ್ಯವಸ್ಥೆಯಿಂದ ಇದನ್ನು ನೀನು ನಿರ್ವಹಿಸಬೇಕು" ಎಂದರು. ತಮಿಳುನಾಡಿನಲ್ಲಿ ಸಂಘದ ಆರ್ಥಿಕ ಸ್ಥಿತಿಯೂ ಚೆನ್ನಾಗಿತ್ತು ಎಂದೇನಿರಲಿಲ್ಲ. ಹಾಗಾಗಿ ಕೊರತೆಯಾದರೆ ಕೇಂದ್ರದಿಂದಲೇ ಭರಿಸುವ ಭರವಸೆಯನ್ನು ನೀಡಿದರು.

ಆ ವರ್ಷವಷ್ಟೇ ಸಹ ಕ್ಷೇತ್ರಪ್ರಚಾರಕರಾಗಿ ತಮಿಳುನಾಡಿಗೆ ಹೋಗಿದ್ದ ಸೂರು ಇದನ್ನೆಲ್ಲ ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿ ಪೈಸೆಗೂ ಲೆಕ್ಕಾಚಾರವಿರಿಸಿ ಗುರೂಜಿಯವರ ಆಪ್ತ ಸಹಾಯಕರಾದ ಆಬಾಜಿ ಥತ್ತೆಯವರಿಗೆ ತಲುಪಿಸಿದರು. ಅದರಂತೆ ಥತ್ತೆಯವರು ಐದು ಪೈಸೆಯನ್ನು ಸೂರು ಅವರಿಗೆ ನೀಡಬೇಕಿತ್ತು. ಸೂರು ಹೊರಡುವ ಸಮಯಕ್ಕೆ ಥತ್ತೆಯವರು ಇರದ ಕಾರಣ ಐದು ಪೈಸೆಯನ್ನು ಬಿಟ್ಟು ಬಂದಿದ್ದರು. ಥತ್ತೆಯವರು ಗುರೂಜಿಯವರಿಗೆ ಲೆಕ್ಕಾಚಾರ ಒಪ್ಪಿಸುವಾಗ ಹೆಚ್ಚುವರಿಯಾಗಿ ಐದು ಪೈಸೆ ಬಂದಿರುವುದನ್ನು ತಿಳಿಸಿದರು. ಗುರೂಜಿಯವರು ಬೈಠಕ್‌ನಲ್ಲಿ ನೀಡಿದ್ದು ಆ ಐದು ಪೈಸೆಯನ್ನೇ!! ಗುರೂಜಿಯವರು ಒಂದೂ ಮಾತಾಡದೇ ಆರ್ಥಿಕ ಶುದ್ಧತೆಯ ಮಹತ್ವವನ್ನು ಈ ರೀತಿ ತಿಳಿಯಪಡಿಸಿದರು.

ಮೂಲ: ಉತ್ತುಂಗ

## ಪುಸ್ತಕ ಪರಿಚಯ




## ಭಾರತದಲ್ಲಿ ಸೆಕ್ಯುಲರ್‌ವಾದ ಮತ್ತು ಅದರ ವಿಮರ್ಶೆ

ಲೇಖಕರು : ಎ. ಷಣ್ಮುಖ
ಪ್ರಕಾಶನ : ವಸಂತ ಪ್ರಕಾಶನ
ಬೆಲೆ : ರೂ. 150

ಇಂದಿನ ಭಾರತದ ರಾಜಕೀಯಕ್ಕೆ ಬಹುಶಃ ಸೆಕ್ಯುಲರಿಸಂ ಎಂಬ ಪರಿಕಲ್ಪನೆಯಷ್ಟು ಬೇರಾವ ಪರಿಕಲ್ಪನೆಗಳೂ ನಿರ್ಣಾಯಕವಾಗಿರುವಂತೆ ಕಾಣುವುದಿಲ್ಲ. ಆದರೆ ಈ ಪರಿಕಲ್ಪನೆಯಷ್ಟು ವೈವಿಧ್ಯಪೂರ್ಣ ನಿರೂಪಣೆಗಳಿಗೆ ಒಳಗಾದ, ದುರುಪಯೋಗಕ್ಕೆ ಒಳಗಾದ, ಅಪವ್ಯಾಖ್ಯೆಗಳಿಗೆ ಒಳಗಾದ, ಹಾಗೂ ಭಾರತೀಯ ಜನಜೀವನದಲ್ಲಿ ಗೊಂದಲವನ್ನು ಸೃಷ್ಟಿಸುತ್ತಿರುವ ಮತ್ತೊಂದು ಪರಿಕಲ್ಪನೆಯೂ ನಮ್ಮ ರಾಜಕೀಯದಲ್ಲಿ ಸಿಗಲಾರದು ಎಂಬುದೂ ಅಷ್ಟೇ ನಿಜ. ಇದಕ್ಕೆಲ್ಲ ಕಳಶವಿಟ್ಟಂತೆ ಸೆಕ್ಯುಲರಿಸಂ ಎಂಬ ಪರಿಭಾಷೆಯನ್ನು ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಅರ್ಥಾರ್ಥ ಸಂಬಂಧವೇ ಇಲ್ಲದ ಶಬ್ದಗಳ ಮೂಲಕ ಭಾಷಾಂತರಿಸಲಾಗಿದೆ. ಪರಿಣಾಮವಾಗಿ ಭಾರತೀಯ ಪ್ರಾದೇಶಿಕ ಭಾಷೆಗಳ ಜಗತ್ತಿನೊಳಗೇ ಬದುಕುವ ರಾಜಕಾರಣಿಗಳೂ, ಚಿಂತಕರೂ, ಮಾಧ್ಯಮದವರೂ, ರಾಜಕೀಯ ವಿಶ್ಲೇಷಕರೂ, ಒಟ್ಟಾರೆಯಾಗಿ ಈ ಕುರಿತು ಮಾತನಾಡುವ ವಿದ್ಯಾವಂತರಿಗೆ ಈ ಪರಿಕಲ್ಪನೆಯೇನು, ಅದರ ಕುರಿತು ಸಮಸ್ಯೆಗಳೇನಿವೆ ಎಂಬ ವಾಸ್ತವಿಕ ಚಿತ್ರಕ್ಕೆ ಪ್ರವೇಶವೇ ಕಷ್ಟಸಾಧ್ಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಕನ್ನಡದಲ್ಲಿ ಸೆಕ್ಯುಲರಿಸಂ ಕುರಿತ ಚರ್ಚೆಗಳನ್ನು ಪರಿಚಯಿಸುವ ಕೆಲಸವು ಎಷ್ಟೊಂದು ಮಹತ್ವಪೂರ್ಣವಾದುದು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಷಣ್ಮುಖ ಅವರ ಈ ಕೃತಿ ಕೇವಲ ಪರಿಚಯವಲ್ಲ. ಅದು ನಮ್ಮ ಕಾಲೇಜು ಶಿಕ್ಷಣದಲ್ಲಿ ಸೆಕ್ಯುಲರಿಸಂ ಕುರಿತ ಚರ್ಚೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಮಹತ್ವಾಕಾಂಕ್ಷೆಯ ಪಠ್ಯ ಕೂಡ. ಇಂಥದ್ದೊಂದು ನವೀನ ಹಾಗೂ ಸಮಕಾಲೀನವಾಗಿ ಪ್ರಸ್ತುತವಾದ ವಿಷಯವನ್ನು ಕಾಲೇಜು ವಿದ್ಯಾರ್ಥಿಗಳಿಗೆ ಕಲಿಸುವ ಕಾರ್ಯಕ್ರಮವೇ ಶ್ಲಾಘನೀಯ. ಈ ಪುಸ್ತಕವು ಪ್ರಜ್ಞಾವಂತ ಕನ್ನಡಿಗರ ಸಮುದಾಯವನ್ನು ಬೆಳೆಸುವ ನಿಟ್ಟಿನಲ್ಲಿ ಸಾರ್ಥಕವಾದ ಪ್ರಯತ್ನವೆಂಬುದು ನಿಸ್ಸಂದೇಹವಾಗಿದೆ.

**ಆನ್‌ಲೈನ್ ಖರೀದಿಗಾಗಿ:** https://www.amazon.in/Bharathadalli-Secularvada-Mattu-Adara-Vimarshe/dp/B0BM9532R5


ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ, ವಿನಯ್ ಕೃಷ್ಣ ಹೆಚ್.ವಿ., ಪ್ರಣವ ಭಟ್, ಹರಿಪ್ರಸಾದ್ ಈಶ್ವರಮಂಗಲ

# ಸಾಲುದ್ದದ ಸುದ್ದಿಗಳು

**ಕಾಶ್ಮೀರಿಗರೇ ನಟಿಸಿದ 'ವೆಲ್‌ಕಂ ಟು ಕಾಶ್ಮೀರ್' ತೆರೆಗೆ**

ಬೆದರಿಕೆಗಳು ಮತ್ತು ಉಗ್ರಗಾಮಿ ಸವಾಲುಗಳನ್ನು ಮೆಟ್ಟಿನಿಂತಿರುವ ಐನಾಕ್ಸ್ ಸಿನಿಮಾ 'ವೆಲ್‌ಕಮ್ ಟು ಕಾಶ್ಮೀರ' ನ ಪ್ರಥಮ ಪ್ರದರ್ಶನವನ್ನು ಆಯೋಜಿಸಲು ಸಿದ್ಧವಾಗಿದೆ. ತಾರೀಕ್ ಭಟ್ ನಿರ್ದೇಶನದ ಈ ಸಿನೆಮಾ ಕಾಶ್ಮೀರಿ ಜನರ ಬಗೆಗಿನ ಸಿನಿಮಾ ಮತ್ತು ಕಣಿವೆಯ ಜನರು ನಟಿಸಿದ ಮೊದಲ ಚಲನಚಿತ್ರವಾಗಿದೆ.

**ನ್ಯಾವಿಗೇಷನ್ ಉಪಗ್ರಹ ಎನ್‌ವಿಎಸ್–01 ಅನ್ನು ಯಶಸ್ವಿಯಾಗಿ ಉಡಾವಣೆಗೊಳಿಸಿದ ಇಸ್ರೋ**



ನ್ಯಾವಿಗೇಷನ್ ಉಪಗ್ರಹ ಎನ್‌ವಿಎಸ್–01 ಅನ್ನು ಹೊತ್ತ ಇಸ್ರೋದ ಜಿಎಸ್‌ಎಲ್‌ವಿ ರಾಕೆಟ್ ಅನ್ನು ಶ್ರೀಹರಿಕೋಟಾ ಬಾಹ್ಯಾಕಾಶ ನಿಲ್ದಾಣದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ಭಾರತೀಯ ಬಾಹ್ಯಾಕಾಶ ಸಂಸ್ಥೆಯು ಈ ಉಪಗ್ರಹದ ಉಡಾವಣೆಯ ಮೂಲಕ ಭಾರತೀಯ ನಕ್ಷತ್ರಪುಂಜದ (NavIC) ಸೇವೆಗಳೊಂದಿಗೆ ನ್ಯಾವಿಗೇಷನ್‌ನ ನಿರಂತರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

**ದೇಶದ್ರೋಹ ಕಡಿವಾಣಕ್ಕೆ ಕಾನೂನು ಬಲ?**

ಭಾರತದ ಕಾನೂನು ಆಯೋಗ ದೇಶದ್ರೋಹದ ಕಾನೂನನ್ನು ಉಳಿಸಿಕೊಳ್ಳಲು ಮತ್ತು ಉಲ್ಲಂಘಿಸಿದವರಿಗೆ ಕನಿಷ್ಠ 3 ವರ್ಷದಿಂದ ಗರಿಷ್ಠ 7 ವರ್ಷಗಳವರೆಗೆ ಜೈಲು ಶಿಕ್ಷೆಗೆ ಮತ್ತು ಹಿಂಸಾಚಾರವನ್ನು ಪ್ರಚೋದಿಸುವ ಅಥವಾ ಸಾರ್ವಜನಿಕ ವಸ್ತುಗಳಿಗೆ ಹಾನಿ ಮಾಡುವಂತಹ ಪ್ರಕರಣಗಳನ್ನು ದೇಶದ್ರೋಹ ಕಾನೂನಿಗೆ ಸೇರಿಸಲು ಆಯೋಗವು ಶಿಫಾರಸು ಮಾಡಿದೆ. ಇದು ಭಾರತದ ವಿರುದ್ಧ ನಿರಂತರವಾಗಿ ಸಾಮಾಜಿಕ ಮಾಧ್ಯಮದಲ್ಲಿ ಮೂಲಭೂತವಾದಿತನ, ಹರಡುವುದು, ಮಾವೋವಾದಿ ಚಟುವಟಿಕೆಗಳು, ಈಶಾನ್ಯ ಮತ್ತು ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದನೆ ಬೆಂಬಲಿಸುವ ಕಾರಣಗಳನ್ನು ಉಲ್ಲೇಖಿಸಿ ದೇಶದ್ರೋಹದ ಕಾನೂನನ್ನು ಉಳಿಸುವಂತೆ ತಿಳಿಸಿದೆ.

**1990ರ ಬಳಿಕ ಮೊದಲ ಬಾರಿಗೆ ಹಿಂದೂಗಳಿಂದ ಖೀರ್ ಭವಾನಿ ಮೇಳ ಆಚರಣೆ**



1990ರ ಬಳಿಕ ಮೊದಲ ಬಾರಿಗೆ 40,000 ಕ್ಕೂ ಹೆಚ್ಚು ಕಾಶ್ಮೀರಿ ಹಿಂದೂಗಳು ಕಾಶ್ಮೀರದಲ್ಲಿ ಖೀರ್ ಭವಾನಿ ಮೇಳವನ್ನು ಆಚರಿಸಿದ್ದಾರೆ. ನೂರಾರು ಕಾಶ್ಮೀರಿ ಪಂಡಿತರು ಕಣಿವೆಯ ಗಂದರ್‌ಬಾಲ್ ಜಿಲ್ಲೆಯ ಪ್ರಸಿದ್ಧ ರಾಗ್ನ್ಯಾ ದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು ಮತ್ತು ವಾರ್ಷಿಕ ಖೀರ್ ಭವಾನಿ ಮೇಳವನ್ನು ಆಚರಿಸಿದರು.

**ಭಾರತ – ನೇಪಾಳ ಸಾಂಸ್ಕೃತಿಕ ಬಾಂಧವ್ಯ ಬೆಸೆಯಲಿರುವ ರಾಮಾಯಣ ಸರ್ಕ್ಯೂಟ್**

ಭಾರತ ಮತ್ತು ನೇಪಾಳದ ನಡುವಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು ಬಹಳ ಹಳೆಯ ಮತ್ತು ಬಲವಾದವು. ಇದನ್ನು ಮತ್ತಷ್ಟು ಬಲಪಡಿಸಲು ಎರಡೂ ದೇಶಗಳ ಪ್ರಧಾನಿಗಳು



ತಮ್ಮ ದ್ವಿಪಕ್ಷೀಯ ಮಾತುಕತೆಯ ಸಮಯದಲ್ಲಿ ರಾಮಾಯಣ ಸರ್ಕ್ಯೂಟ್‌ಗೆ ಸಂಬಂಧಿಸಿದ ಯೋಜನೆಗಳನ್ನು ತ್ವರಿತಗೊಳಿಸಬೇಕು ಎಂದು ನಿರ್ಧರಿಸಿದ್ದಾರೆ.

**ಜೂ.15ರೊಳಗೆ ಅಮರನಾಥ ಯಾತ್ರೆಯ ಮಾರ್ಗ ಪುನಃಸ್ಥಾಪನೆ**

ಕಳೆದ ಸೆಪ್ಟೆಂಬರ್‌ನಲ್ಲಿ ಅಮರನಾಥ ಯಾತ್ರೆ ಮಾರ್ಗದ ಉನ್ನತೀಕರಣವನ್ನು ಒಪ್ಪಿಕೊಂಡಿದ್ದ ಬಾರ್ಡರ್ ರೋಡ್ ಆರ್ಗನೈಸೇಶನ್ (BRO) ಅಮರನಾಥ ಯಾತ್ರಾ ಮಾರ್ಗದ ಪುನಃಸ್ಥಾಪನೆ ಕಾರ್ಯವನ್ನು ಜೂನ್ 15 ರೊಳಗೆ ಪೂರ್ಣಗೊಳಿಸಲಿದೆ. ರಕ್ಷಣಾ ಸಚಿವಾಲಯದ ಪ್ರಕಾರ, ಕೆಲಸದ ವ್ಯಾಪ್ತಿಯು ಹಿಮ ತೆರವು, ಮಾರ್ಗ ಅಗಲೀಕರಣ, ಎಲ್ಲಾ ಕಾಲು ಸೇತುವೆಗಳ ಮರುಸ್ಥಾಪನೆ, ಹ್ಯಾಂಡ್ ರೈಲ್‌ಗಳ ಫಿಕ್ಸಿಂಗ್ ಮತ್ತು ಬ್ರೇಕ್ ವಾಲ್‌ಗಳ ನಿರ್ಮಾಣವನ್ನು ಒಳಗೊಂಡಿರುತ್ತದೆ. ಈ ವರ್ಷ ಜುಲೈ 1 ರಂದು ಅಮರನಾಥ ಯಾತ್ರೆ ಆರಂಭವಾಗಲಿದೆ.

**ಭಾರತೀಯ ನೌಕಾಪಡೆಯ ಅಗ್ನಿವೀರ್ 02/2023 ಬ್ಯಾಚ್ ನೇಮಕಾತಿ ಆರಂಭ**

ಭಾರತೀಯ ನೌಕಾಪಡೆಯು ಅಗ್ನಿವೀರ್ 02/2023 ಬ್ಯಾಚ್ ನೇಮಕಾತಿಗಾಗಿ ಅಧಿಕೃತ ಅಧಿಸೂಚನೆಯನ್ನು ಬಿಡುಗಡೆ ಮಾಡಿದೆ. ಮೇ 29 ರಂದು ಆನ್‌ಲೈನ್ ನೋಂದಣಿ ವಿಂಡೋ ತೆರೆಯಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂನ್ 15. ಒಟ್ಟು 1365 ಹುದ್ದೆಗಳಿವೆ. ಅವಿವಾಹಿತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಒಟ್ಟು 1365 ಹುದ್ದೆಗಳ ಪೈಕಿ ಗರಿಷ್ಠ 273 ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಆಕಾಂಕ್ಷಿಗಳು ಅಧಿಕೃತ ವೆಬ್‌ಸೈಟ್ joinindiannavy.gov.in ನಲ್ಲಿ ಪಡೆದುಕೊಳ್ಳಬಹುದು

## ವೃತ್ತಿಯೂ ಪ್ರವೃತ್ತಿಯೂ ವ್ಯಕ್ತಿತ್ವ ವಿಕಸನಕ್ಕಾಗಿ ಎನ್ನುವುದನ್ನು ಸಾದರಪಡಿಸುವ ದಯಾನಂದ ಪಿ ಅಂಚನ್

ಪ್ರೇರಣಾ

ಪ್ರತಿಭೆ ಎನ್ನುವುದು ಯಾರೊಬ್ಬರ ಸ್ವತ್ತಲ್ಲ. ಅದು ಪ್ರತಿಯೊಬ್ಬರಲ್ಲೂ ಸುಪ್ತವಾಗಿ ಅಡಗಿರುತ್ತದೆ. ಪ್ರತಿ ವ್ಯಕ್ತಿಯಲ್ಲೂ ಅಡಗಿರುವ ಪ್ರತಿಭೆಯ ಅನಾವರಣಕ್ಕೆ ಪ್ರೋತ್ಸಾಹ ಸಿಗಬೇಕು. ಮನೆಯವರ, ಗುರು ಹಿರಿಯರ, ಸ್ನೇಹಿತರ, ಸಂಬಂಧಿಗಳ ಹಾಗೂ ಸ್ವಪ್ರೇರಣೆಯಿಂದ ಪ್ರತಿಭಾನ್ವೇಷಣೆ ಸಾಧ್ಯವಾಗುತ್ತದೆ. ಇಲ್ಲಿ ಹೇಳಲು ಹೊರಟಿರುವ ವ್ಯಕ್ತಿಯು ತನ್ನ ಸ್ವ ಆಸಕ್ತಿಯಿಂದ ಪ್ರತಿಭೆಯನ್ನು ತಮ್ಮದಾಗಿಸಿಕೊಂಡವರು. ವೃತ್ತಿ ಮತ್ತು ಪ್ರವೃತ್ತಿಯನ್ನು ಒಟ್ಟಿಗೆ ಹೇಗೆ ನಿಭಾಯಿಸಬಹುದು ಎನ್ನುವುದಕ್ಕೆ ನಮಗೆ ಸಿಗುವ ಉತ್ತಮ ನಿದರ್ಶನ. ಆಸಕ್ತಿಯಿಂದ ಕಲಿತ ತಮ್ಮಿಷ್ಟದ ಚಟುವಟಿಕೆಗಳನ್ನು ಒತ್ತಡದ ವೃತ್ತಿಯ ನೆಪ ಹೇಳಿ ನಡು ನೀರಲ್ಲೇ ಕೈಬಿಡುವ ಅಸಂಖ್ಯಾತ ಯುವಕರಿಗೆ ಮಾದರಿ ಆಗಬಲ್ಲವರು.

ಪ್ರತಿಭೆಗೆ ವಯಸ್ಸಿನ ಮಿತಿಯಾಗಲಿ, ಮಾಡುವ ಕೆಲಸವಾಗಲಿ ಅಡ್ಡಿಯಾಗುವುದಿಲ್ಲ. ಆಸಕ್ತಿ ಇದ್ದರೆ ಸಾಕು ಸಮಯ ವ್ಯರ್ಥ ಮಾಡದೆ ಸಿಕ್ಕ ಬಿಡುವಿನ ಸಮಯದಲ್ಲಿ ಪ್ರತಿಭೆಯ ಅನಾವರಣ ಮಾಡಬಹುದು ಎಂಬುದಕ್ಕೆ ಉತ್ತಮ ಉದಾಹರಣೆ ಮಂಗಳೂರಿನ ಬಿ.ಎಸ್.ಎನ್. ಎಲ್ ಕಛೇರಿಯಲ್ಲಿ ಕಾವಲುಗಾರರಾಗಿರುವ ದಯಾನಂದ ಪಿ. ಅಂಚನ್. ತಮ್ಮ ಬಿಡುವಿನ ವೇಳೆಯಲ್ಲಿ ಕಚೇರಿಯಲ್ಲೇ ಮೂಲೆಯ ಖುರ್ಚಿಯಲ್ಲಿ ಕುಳಿತು, ಬಿಳಿ ಹಾಳೆಯಲ್ಲಿ ಚಿತ್ರ ಬಿಡಿಸುತ್ತಾ, ಗೋಡೆಯಲ್ಲಿ ತಮ್ಮ ಮೊಬೈಲ್ ಮೂಲಕ ಶೇಡೋ ಪ್ಲೇ ಮಾಡುವ ವಿಶಿಷ್ಟ ಕಲಾವಿದ, ಎಲ್ಲಾರಲ್ಲೂ ಪ್ರೀತಿಯಿಂದ ಮಾತನಾಡುವ ಸ್ನೇಹಜೀವಿ ಇವರು.

ಚಿಕ್ಕದಿರುವಾಗ ತಮ್ಮ ಮನೆಯ ಸಮೀಪದ ವ್ಯಕ್ತಿ ಗೋವಿಂದ ಪೈ ಎನ್ನುವವರು ಶೇಡೋ ಪ್ಲೇ ಮೂಲಕ ಗೋಡೆಯಲ್ಲಿ ಕೈಚಲನೆ



ಬಳಸಿ ಬೆಳಕಿನ ನೆರಳಿನಲ್ಲಿ ಮೂಡಿಸುತ್ತಿದ್ದ ಹಕ್ಕಿಗಳು, ಪ್ರಾಣಿಗಳ, ಮನುಷ್ಯನನ್ನು ನೋಡುತ್ತಾ ನೋಡುತ್ತಾ ತಾವು ನಿಧಾನವಾಗಿ ಆಸಕ್ತಿಯಿಂದ ಸತತ ಪ್ರಯತ್ನ ಪಟ್ಟು ಶೇಡೋ ಪ್ಲೇ ಮೂಲಕ ಗಿಳಿ, ಬಾತುಕೋಳಿ, ಕೊಕ್ಕರೆ, ಮನುಷ್ಯ, ಸಿಂಹದ ಆಕಾರಗಳನ್ನು ಮಾಡುವುದನ್ನು ಕಲಿತರು. ಹಾಗೂ ಮನಸ್ಸಿದ್ದರೆ ಹೇಗೆದರೂ ಕಲಿಯಬಹುದು ತಾವು ಮೊದಲು ಕೆಲಸ ಮಾಡುತ್ತಿದ್ದ ರೈಸ್ ಮಿಲ್‌ನಲ್ಲಿ ಬರುತ್ತಿದ್ದ ಧೂಳಿನಲ್ಲೇ ಚಿತ್ರ ಬಿಡಿಸುತ್ತಾ ನಂತರ ಕಾಗದದ ಮೇಲೆ ಚಿತ್ರಗಳನ್ನು ಬಿಡಿಸಲು ಪ್ರಾರಂಭಿಸಿದರು.

ಮಾಡುವ ಕಾಯಕದೊಂದಿಗೆ ಹವ್ಯಾಸವನ್ನು ಬಿಡದೆ ಅನೇಕ ವರ್ಷಗಳಿಂದ ಮುಂದುವರಿಸಿಕೊಂಡು ಹೋಗುತ್ತಿರುವ ದಯಾನಂದ ಪಿ. ಅಂಚನ್ ವೃತ್ತಿಯಲ್ಲಿ ತಾವು ಮಂಗಳೂರಿನಲ್ಲಿರುವ ಬಿ.ಎಸ್. ಎನ್.ಎಲ್ ಕಛೇರಿಯಲ್ಲಿ ಬೆಳಗ್ಗೆ ಕಾವಲುಗಾರರು. ಆದರೆ ಪ್ರವೃತ್ತಿಯಲ್ಲಿ ಅದ್ಭುತವಾಗಿ ಚಿತ್ರಗಳನ್ನು ಬಿಡಿಸುವ ಕಲಾ ಆರಾಧಕರು. ಆಶ್ಚರ್ಯವೆಂದರೆ ಚಿತ್ರಕಲೆ, ಶೇಡೋ ಪ್ಲೇ ಅನ್ನು ಯಾರ ಬಳಿಯಲ್ಲೂ ತರಬೇತಿ ಪಡೆದು ಕಲಿಯದೆ ತಾವೇ ಸ್ವತಃ ಆಸಕ್ತಿಯಿಂದ ಅನೇಕ ವರ್ಷಗಳ ಪರಿಶ್ರಮದಿಂದ ಕರಗತ ಮಾಡಿಕೊಂಡರು. ತಮ್ಮ ಹವ್ಯಾಸವನ್ನು ಉದ್ಯೋಗದ ಜೊತೆಗೆ ಬೆಳೆಸುತ್ತಾ ಅದ್ಭುತವಾಗಿ ವಿವಿಧ ವ್ಯಕ್ತಿಗಳ, ಹಲವು ಸಾಧಕರ ಮುಖಗಳ ಚಿತ್ರಗಳನ್ನು ಬಿಡಿಸುತ್ತಾ, ಮೊಬೈಲ್ ಬೆಳಕಿನಲ್ಲೇ ಗೋಡೆಗಳ ಮೇಲೆ ಹಕ್ಕಿ, ಹುಲಿ, ಮನುಷ್ಯ ಮಾತಾನಾಡುವಂತಹ ಆಕೃತಿಗಳನ್ನು ಶೇಡೋ ಪ್ಲೇ ಮೂಲಕ ಮಾಡಿ ತೋರಿಸುವ ಪ್ರಯತ್ನಶೀಲ ಪ್ರತಿಭಾವಂತ ದಯಾನಂದ ಪಿ. ಅಂಚನ್

ಯಾರೇ ಅವರನ್ನು ಮಾತನಾಡಿಸಿ ಅವರ ಕಲೆಯ ಬಗ್ಗೆ ಕೇಳಿದಾಗ ಪ್ರೀತಿಯಿಂದ ಬಿಡಿಸಿದ ಚಿತ್ರಗಳನ್ನು, ಶೇಡೋ ಪ್ಲೇ



ತೋರಿಸಿ ಖುಷಿ ಹಂಚಿಕೊಳ್ಳುತ್ತಾರೆ. ಆದರೆ ಅವರ ಕಲೆಯ ಪರಿಚಯವಾದ ಜನರು ಸತತ ಪರಿಶ್ರಮದಿಂದ ಹೀಗೂ ಕಲಾಸಿದ್ಧಿಯನ್ನು ಪಡೆಯಬಹುದೇ? ಎನ್ನುವುದನ್ನು ಬೆರಗುಗಣ್ಣಿನಿಂದ ನೋಡುತ್ತಾರೆ. ಸಾಧಿಸಲು ಛಲ ಹಾಗೂ ಶ್ರದ್ಧೆ ಇದ್ದರೆ ಸಾಕು. ಸ್ವ–ಆಸಕ್ತಿಯಿಂದ ಕಲಿತು, ಕಲಿತ ವಿದ್ಯೆಯನ್ನು ನಡುನೀರಲ್ಲಿ ಕೈಬಿಡದೆ ಇಲ್ಲಿಯವರೆಗೂ ಉಳಿಸಿಕೊಂಡು ಬಂದಿರುವ ಅವರ ಕಲೆಯ ಮೇಲಿನ ಪ್ರೀತಿ ನಿಜಕ್ಕೂ ಪ್ರೇರಣೆ ನೀಡುವಂತದ್ದು. ವೃತ್ತಿಯೆಂಬ ಅಗತ್ಯತೆಯ ಒತ್ತಡದ ನಡುವೆ ಪ್ರವೃತ್ತಿಯೆಂಬ ಒತ್ತಡ ನಿವಾರಕನನ್ನು ಕಡೆಗಣಿಸಿ ಶ್ರಮಪಡುತ್ತಿರುವ ಯುವಕರಿಗೆ ಮಾದರಿ ಆಗುವಂತದ್ದು. ಇಂತಹ ಎಲೆಮರೆಯ ಕಾಯಿಯಂತಿರುವ ಅನೇಕರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಿಸೋಣ. ಯಾವಾಗಲಾದರೂ ಬಿ.ಎಸ್.ಎನ್. ಎಲ್ ಮಂಗಳೂರಿನ ಕಛೇರಿಗೆ ಹೋದಾಗ ಅಲ್ಲೇ ಹೊರಗೆ ಕುಳಿತು ಸಮಯ ಸಿಕ್ಕಾಗ ಎಳೆಎಳೆಯಾಗಿ ಚಿತ್ರವನ್ನು ಬಿಡಿಸುತ್ತಾ ಅದರಲ್ಲೇ ಖುಷಿ ಪಡುವ ದಯಾನಂದ ಪಿ. ಅಂಚನ್ ಅವರನ್ನು ಮಾತನಾಡಿಸಲು ಮರೆಯದಿರೋಣ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JUNE 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-06-2023



## ರಾಷ್ಟ್ರಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕು: ಡಾ. ಮೋಹನ್ ಭಾಗವತ್ । ನಾಗ್ಪುರದಲ್ಲಿ ನಡೆದ ತೃತೀಯ ವರ್ಷ ಸಂಘ ಶಿಕ್ಷಾ ವರ್ಗದಲ್ಲಿ ಅಭಿಮತ

**ನಾಗ್ಪುರ:** ಭಾರತದ ಏಕತೆ, ಅಖಂಡತೆ, ಏಕಾತ್ಮತೆಗಾಗಿ ಎಲ್ಲರೂ ಶ್ರಮಿಸಬೇಕಿದೆ, ರಾಷ್ಟ್ರಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕು. ರಾಜಕೀಯ ವ್ಯವಸ್ಥೆಯಲ್ಲಿ ಪರಸ್ಪರ ಟೀಕೆ ಮಾಡುವುದು ಸಹಜವೇ. ಆದರೆ ಜನರಲ್ಲಿ ವಿಷಮತೆ ಬೆಳೆಸಬಾರದು, ಪರಸ್ಪರ ಜಗಳಕ್ಕೆ ಎಡೆಮಾಡಿಕೊಡಬಾರದು, ಸ್ವತ್ವದ ಆಧಾರದ ಮೇಲೆ ರಾಷ್ಟ್ರೋತ್ಥಾನದ ಮೂಲಕ ಭಾರತವನ್ನು ವಿಶ್ವಗುರುವನ್ನಾಗಿಸುವ ಸಂಕಲ್ಪವನ್ನು ನಾವೆಲ್ಲರೂ ತೊಡಬೇಕು ಎಂದು ಆರೆಸ್ಸೆಸ್ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಹೇಳಿದ್ದಾರೆ.

ನಾಗ್ಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ವರ್ಷ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮುಖ್ಯಭಾಷಣ ಮಾಡಿದರು.

ಯಾವ ರಾಷ್ಟ್ರದ ಸಾಮಾನ್ಯ ಜನರು ತಮ್ಮ ನಡುವಿನ ಬೇಧ ಮತ್ತು ಸ್ವಾರ್ಥವನ್ನು ಬಿಟ್ಟು ಒಂದಾಗಿ ತನ್ನ ತಾಯ್ನಾಡಿಗಾಗಿ ಬದುಕುವುದನ್ನು ಮತ್ತು ಬಲಿದಾನವಾಗುವುದನ್ನು ಕಲಿಯುತ್ತಾರೋ ಆ ರಾಷ್ಟ್ರ ಉತ್ಥಾನವಾಗುತ್ತದೆ ಎಂದು ಡಾ.ಮೋಹನ್ ಭಾಗವತ್ ಹೇಳಿದರು.

ಇತ್ತೀಚೆಗೆ ಲೋಕಾರ್ಪಣೆಗೊಂಡ ನೂತನ ಸಂಸತ್ ಜನರನ್ನು ಸಾಂಸ್ಕೃತಿಕವಾಗಿ ಜಾಗೃತಿಗೊಳಿಸುವ ಪ್ರಯತ್ನವನ್ನು ಮಾಡಿದೆ. ವೈವಿಧ್ಯತೆಯನ್ನು ಈ ರಾಷ್ಟ್ರಕ್ಕೆ ಎಲ್ಲಿಂದಲೋ ಎರವಲು ತಂದಿದ್ದಲ್ಲ. ಅದು ಶತಮಾನಗಳಿಂದ ಇಲ್ಲಿನ ಸಂಸ್ಕೃತಿಯಲ್ಲೇ ಸಮನ್ವಯಗೊಂಡಿರುವಂತದ್ದು. ನಮ್ಮ ದೇಶದಲ್ಲಿರುವ ಹಲವು ಆಚಾರಗಳಲ್ಲಿ ಹಲವು ವಿದೇಶಿ ಆಚಾರಗಳೂ ಇವೆ. ಆದರೆ ಒಂದು ಸಮಾಜವಾಗಿ ನಾವು ಈ ದೇಶದವರು. ನಮ್ಮ ಪೂರ್ವಜರು ಇಲ್ಲಿಗೆ ಸಂಬಂಧಪಟ್ಟವರು ಎಂಬ ವಾಸ್ತವವನ್ನು ಒಪ್ಪಬೇಕು. ಬಂಧು




ಭಾವದ ಆಧಾರದ ಮೇಲೆ ವಿವಿಧತೆಯ ರಕ್ಷಣೆಯಾಗಬೇಕು. ವಿವಿಧತೆಗೆ ತೊಂದರೆ ನೀಡುವ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕು ಎಂದರು.

ನಮ್ಮ ದುಸ್ಥಿತಿಗೆ ನಾವು ನಮ್ಮ ಸ್ವತ್ವವನ್ನು ಮರೆತದ್ದೇ ಕಾರಣ. ಅದರಿಂದಾಗಿ ವಿಭಜನೆಗೊಂಡು ನಮ್ಮ ಸಂಘಟಿತ ಶಕ್ತಿ ಕಳೆದುಕೊಂಡೆವು. ಅಲ್ಲಿಂದ ನಮ್ಮ ಸಮಾಜದ ವಿಘಟನೆ ಆರಂಭವಾಯಿತು. ಆದ್ದರಿಂದ ನಾವು ನಮ್ಮ ಸ್ವತ್ವವನ್ನು ಕಂಡುಕೊಳ್ಳಬೇಕು. ನಮ್ಮ ರಾಷ್ಟ್ರೀಯ ಪರಂಪರೆಯ ಆಧಾರಿತವಾಗಿ ಭಾರತವನ್ನು ವಿಶ್ವಗುರು ಮಾಡಿ ಜಗತ್ತಿನ ಸಮಸ್ಯೆಗಳಿಗೆ ಉತ್ತರ ನೀಡುವ ಸಂಕಲ್ಪ ಮಾಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕೊಲ್ಲಾಪುರದ ಕನೇರಿಯ ಶ್ರೀ ಸಿದ್ಧಗಿರಿ ಸಂಸ್ಥಾನ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ನಮ್ಮ ರಾಷ್ಟ್ರವು ವಿಶ್ವ ಗುರುವಾಗಿತ್ತು ಮತ್ತು ಆ ಸ್ಥಾನವನ್ನು ಮರುಸ್ಥಾಪಿಸಲು, ನಿರಂತರವಾಗಿ ಕೆಲಸ ಮಾಡಲು ಸಮರ್ಥವಾಗಿರುವ ಯಾವುದೇ ಸಂಸ್ಥೆ ಇದ್ದರೆ, ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ. ಸಂಘವು ಅನುಶಾಸನ, ಸೇವೆ, ಸಮರ್ಪಣೆ, ಜ್ಞಾನ, ಸಜ್ಜನತೆ, ಸಕಾರಾತ್ಮಕತೆ, ಸಾಮರಸ್ಯ, ಹಿಂದುತ್ವಕ್ಕೆ ಅನ್ವರ್ಥ ಹೆಸರು. ಹಿಂದುತ್ವವೇ ರಾಷ್ಟ್ರೀಯತೆ ಎಂದರು.

ನಮ್ಮ ರಾಷ್ಟ್ರದ ಯುವಕರ ಸಾಮರ್ಥ್ಯ ವ್ಯರ್ಥವಾಗಬಾರದು. ನಮ್ಮ ವೈಭವಶಾಲಿ ಸಂಸ್ಕೃತಿ ವಿಸ್ಮೃತಿಗೆ ಒಳಗಾಗಬಾರದು. ನಮ್ಮ ಅಂತಃಸತ್ವವು ಶಾರೀರಿಕ, ಬೌದ್ಧಿಕ, ಮಾನಸಿಕ ಮತ್ತು ವಾಚಿಕ ರೂಪದಲ್ಲಿ ಪ್ರಕಟೀಕರಣಗೊಳ್ಳಬೇಕು. ಈ ಕೆಲಸ ಸಂಘ ಶಿಕ್ಷಾ ವರ್ಗದಿಂದಾಗುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಸಂಘ ಶಿಕ್ಷಾ ವರ್ಗದ ವರ್ಗಾಧಿಕಾರಿ ಕೃಷ್ಣಮೋಹನ್, ವಿದರ್ಭ ಪ್ರಾಂತ ಸಂಘಚಾಲಕ ರಾಮ ಹರಕರೆ ಹಾಗೂ ನಾಗ್ಪುರ ಮಹಾನಗರ ಸಂಘಚಾಲಕ ರಾಜೇಶ್ ಲೋಯಾ ಉಪಸ್ಥಿತರಿದ್ದರು. ವರ್ಗ ಕಾರ್ಯವಾಹ ನಾ. ತಿಪ್ಪೇಸ್ವಾಮಿ ವರ್ಗದ ವರದಿ ವಾಚಿಸಿದರು. ಅಖಿಲ ಭಾರತೀಯ ಪದಾಧಿಕಾರಿಗಳಾದ ಸುರೇಶ್ ಭಯ್ಯಾಜಿ ಜೋಶಿ, ಸಹಸರಕಾರ್ಯವಾಹ ರಾಮದತ್ತ ಚಕ್ರಧರ, ಅಖಿಲ ಭಾರತೀಯ ಶಾರೀರಿಕ ಪ್ರಮುಖ್ ಸುನೀಲ್ ಕುಲಕರ್ಣಿ, ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್, ವ್ಯವಸ್ಥಾ ಪ್ರಮುಖ ಮಂಗೇಶ್ ಬೇಂಢೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ರಾಷ್ಟ್ರದ ವಿವಿಧ ಭಾಗಗಳಿಂದ ಆಗಮಿಸಿದ ಶಿಬಿರದ ಶಿಕ್ಷಾರ್ಥಿಗಳಿಂದ ವಿವಿಧ ಶಾರೀರಿಕ ಪ್ರಾತ್ಯಕ್ಷಿಕೆ ನಡೆಯಿತು.

ಮೇ 8 ರಂದು ಪ್ರಾರಂಭಗೊಂಡ ತೃತೀಯ ವರ್ಷ ಸಂಘ ಶಿಕ್ಷಾ ವರ್ಗದಲ್ಲಿ ದೇಶದ ಎಲ್ಲಾ 45 ಪ್ರಾಂತಗಳಿಂದ ಆಯ್ದ 676 ಶಿಕ್ಷಾರ್ಥಿಗಳು ಭಾಗವಹಿಸಿದ್ದರು.

## ಹಿಂದೂ ಭಾವ ಜಾಗೃತಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೊಡುಗೆ: ರವೀಂದ್ರ

**ಬೆಂಗಳೂರು:** ನಾನೊಬ್ಬ ಹಿಂದು ಎಂದು ಹೇಳುವುದಕ್ಕೆ ಹಿಂಜರಿಯುತ್ತಿದ್ದ ವಾತಾವರಣದಿಂದ ಹೊರಬಂದು ಹಿಂದೂ ಎಂದು ಕರೆಸಿಕೊಳ್ಳುವುದು ನನ್ನ ಹೆಮ್ಮೆ ಎಂಬ ಭಾವ ನಿರ್ಮಾಣ ಕಾರ್ಯ ಸಂಘದ ಸಾಧನೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ರವೀಂದ್ರ ಹೇಳಿದರು.




ಬೆಂಗಳೂರಿನ ಚನ್ನೇನಹಳ್ಳಿಯಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ದ್ವಿತೀಯ ವರ್ಷ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದುಗಳು ಸಾಮಾಜಿಕವಾಗಿ ಸಂಘಟಿತರಾಗಲು ಸಾಧ್ಯವೇ ಇಲ್ಲ ಎನ್ನುವ ವಾತಾವರಣ ಈಗ ಬದಲಾಗಿದೆ. ಒಂದೇ ಮತ, ಒಂದೇ ಭಾಷೆ, ಒಂದೇ ಆಚಾರ ವಿರುವ ರಾಷ್ಟ್ರಗಳೇ ಜಗಳವಾಡುತ್ತಿರುವಾಗ ಅಸಂಖ್ಯಾತ ಪಂಥಗಳು, ಭಾಷೆಗಳು, ಆಚಾರಗಳನ್ನೊಳಗೊಂಡ ನಮ್ಮ ರಾಷ್ಟ್ರದಲ್ಲಿ ಸಂಘಟಿತ ಮತ್ತು ಸಾಮರಸ್ಯದ ಜೀವನ ನಡೆಸುವ ಹಿಂದೂ ಸಮಾಜದ ನಿರ್ಮಾಣ ಸಂಘ ಕಾರ್ಯದ ಪರಿಣಾಮ ಎಂದು ನುಡಿದರು.

ಸಂಘ ಕಾರ್ಯ ಆಸಕ್ತಿ ಮತ್ತು ಅವಕಾಶದ ಕಾರಣಕ್ಕಾಗಿ ನಡೆಯುತ್ತಿರುವುದಲ್ಲ. ಬದಲಾಗಿ ಅಗತ್ಯತೆಯ ಕಾರಣಕ್ಕಾಗಿ ಸಂಘ ಕಾರ್ಯ ಮಾಡಬೇಕಾಗಿದೆ. ನನ್ನ ರಾಷ್ಟ್ರ ಎಂಬ ಭಾವಜಾಗೃತಿಯೊಂದಿಗೆ ಸಂಘದ ಹಿತೈಷಿಗಳೂ ಸ್ವಯಂಸೇವಕರು, ಕಾರ್ಯಕರ್ತರಾಗಿ ಜೊತೆಯಾಗಬೇಕಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೃಷಿ ವಿಜ್ಞಾನಿ ರಾಜೇಂದ್ರ ಹೆಗಡೆ ಅವರು ಮಾತನಾಡಿ ಅಪ್ರತಿಮ ರಾಷ್ಟ್ರಭಕ್ತರನ್ನು ನಿರ್ಮಿಸುವಲ್ಲಿ ಸಂಘ ಅಮೂಲ್ಯ ಕೊಡುಗೆ ನೀಡುತ್ತಿದೆ. ಸಾಮಾಜ ಸೇವೆಗಾಗಿ ಸದಾ ಮಿಡಿಯುವ ಸಂಘಟನೆಯಾಗಿ ಗುರುತಿಸಿಕೊಂಡಿದೆ. ಸಂಘವನ್ನು ತಿಳಿಯಬೇಕಿದ್ದರೆ, ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಅಭಿಪ್ರಾಯಪಟ್ಟರು.

ವರ್ಗದ ಸರ್ವಾಧಿಕಾರಿ ಕೃಷ್ಣಮೂರ್ತಿ ವರ್ಗದ ವರದಿ ಪ್ರಸ್ತುತ ಪಡಿಸಿದರು. ಮೇ 14 ರಂದು ಪ್ರಾರಂಭವಾದ ಈ ವರ್ಗಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಪೇಜಾವರದ ಶ್ರೀ ವಿಶ್ವಪ್ರಸನ್ನತೀರ್ಥರು ಭೇಟಿ ನೀಡಿದರು. ರಾಜ್ಯದ 77 ಸ್ಥಾನಗಳಿಂದ 89 ಶಿಕ್ಷಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿತೈಷಿಗಳು, ಸಾರ್ವಜನಿಕರು ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದರು.



*ಛತ್ರಪತಿ ಶಿವಾಜಿ ಮಹಾರಾಜರ 350ನೇ ವರ್ಷದ ಪಟ್ಟಾಭಿಷೇಕದ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಶಿವಾಜಿ ಮಹಾರಾಜರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.*

## ವಿಜ್ಞಾನ ಭಾರತಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಜಯಂತ ಸಹಸ್ರಬುದ್ಧೆ ವಿಧಿವಶ



**ಪುಣೆ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರು, ವಿಜ್ಞಾನ ಭಾರತಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿದ್ದ ಜಯಂತ ಸಹಸ್ರಬುದ್ಧೆ ವಿಧಿವಶರಾಗಿದ್ದಾರೆ. ಘಾಜಿಯಾಬಾದ್‌ನಲ್ಲಿ ಕಾರು ಅಪಘಾತಕ್ಕೆ ಒಳಗಾಗಿ ಕಳೆದ ಸೆಪ್ಟೆಂಬರ್‌ನಿಂದ ಚಿಕಿತ್ಸೆ ಪಡೆಯುತ್ತಿದ್ದ ಇವರು ಜೂನ್ 2ರಂದು ಚಿಕಿತ್ಸೆ ಫಲಕಾರಿಯಾಗದೆ ಪುಣೆಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

> **ಜಯಂತ್ ಸಹಸ್ರಬುದ್ಧೆ ಅವರ ಕಾರ್ಯಕುಶಲತೆ, ನೇತೃತ್ವದ ಕ್ಷಮತೆ ಮತ್ತು ಸಮರ್ಪಣೆಯ ಪ್ರೇರಣೆಯೊಂದಿಗೆ ಕಾರ್ಯನಿರ್ವಹಣೆ ಮಾಡುವ ಗುಣ ಸದಾ ಪ್ರೇರಣೀಯ. ಅಗಲಿದ ಅವರ ದಿವ್ಯಾತ್ಮಕ್ಕೆ ವೈಯಕ್ತಿಕವಾಗಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸುತ್ತೇನೆ.**
> **– ಡಾ.ಮೋಹನ್ ಭಾಗವತ್**

1989ರಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ, 2010ರಿಂದ ವಿಜ್ಞಾನ ಭಾರತಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಜಾದಿ ಕಾ ಅಮೃತ ಮಹೋತ್ಸವದ ಪರ್ವ ಕಾಲದಲ್ಲಿ ರಾಷ್ಟ್ರಾದ್ಯಂತ 'ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ವಿಜ್ಞಾನಿಗಳ ಪಾತ್ರ' ಎಂಬ ವಿಷಯದ ಕುರಿತು ಉಪನ್ಯಾಸಗಳನ್ನು ನೀಡಿದ್ದರು. ಇಂಡಿಯಾ ಇಂಟರ್ ನ್ಯಾಶನಲ್ ಸೈನ್ಸ್ ಫೆಸ್ಟಿವಲ್, ವರ್ಲ್ಡ್ ಆಯುರ್ವೇದ ಕಾಂಗ್ರೆಸ್, ಭಾರತೀಯ ವಿಜ್ಞಾನ ಸಮ್ಮೇಳನಗಳನ್ನು ಆಯೋಜಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಇವರ ಅಗಲಿಕೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ.ಮೋಹನ್ ಭಾಗವತ್, ವಿಜ್ಞಾನ ಭಾರತಿಯ ಎಲ್ಲಾ ಸದಸ್ಯರು ಮತ್ತು ಹಿತೈಶಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.